# ನೀಳಕಾಲುಗಳ ನಗೆ ಸುಂದರಿ..

ಉದ್ದ ಕಾಲುಗಳ ನಗೆ ಸುಂದರಿ ಈ ಮಲ್ಲಿಕಾ. ಬರೇ ಮಲ್ಲಿಕಾ ಅಂದರೆ ಗೊತ್ತಾಗುವುದು ಕಷ್ಟ; ಅದೇ ಮಲ್ಲಿಕಾ ಶೆರಾವತ್ ಅನ್ನಿ– ಹದಿಹರೆಯದ ಹುಡುಗರ ಎದೆ ಢವಢವ ಅನ್ನುತ್ತೆ! ಇಮ್ರಾನ್ ಹಶ್ಮಿ ಜತೆಗಿನ 'ಮರ್ಡರ್' ಮಲ್ಲಿಕಾಳ ಹಾಟ್ ಸೀನ್‌ಗಳೆಲ್ಲ ನೆನಪಾಗುತ್ತೆ.

ಮೊನ್ನೆ ಮಲ್ಲಿಕಾ ಬೆಂಗಳೂರಿಗೆ ಬಂದಿದ್ದಳು. ಬಾಲಿವುಡ್ ಚಿತ್ರ 'ಹಿಸ್ಸ್'ನ ಪ್ರಚಾರಕ್ಕೆ. ಚಿತ್ರದಲ್ಲಿ ಮಲ್ಲಿಕಾಳೇ ನಾಯಕಿ. ಬಹುತೇಕ ಭಾರತೀಯ ಭಾಷೆಗಳಲ್ಲಿಯೂ ಬಿಡುಗಡೆಯಾದ ಈ ಚಿತ್ರದ ಪಾತ್ರಕ್ಕೆ ಈಗಾಗಲೆ ವೆನಿಸ್ ಚಿತ್ರೋತ್ಸವದಲ್ಲಿ ಭರ್ಜರಿ ಪ್ರಚಾರ ಸಿಕ್ಕಿದೆ.

ಹಾಗೆ ನೋಡಿದರೆ ಬೆಂಗಳೂರು ಮಲ್ಲಿಕಾಗೆ ಹೊಸತೇನಲ್ಲ. ಈ ಹಿಂದೆ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲಿ ಈಕೆ ಕಾಣಿಸಿಕೊಂಡಿದ್ದಾಳೆ. ಹಾಗೆಯೇ ತಮಿಳಿನ ಕಮಲ ಹಾಸನ್‌ನ 'ದಶಾವತಾರಂ' ನಲ್ಲೂ ಅಭಿನಯಿಸಿದ್ದಾಳೆ. 2003ರ ಬಾಲಿವುಡ್‌ನ ಹಿಟ್‌ಚಿತ್ರ 'ಖ್ವಾಯಿಷ್' ಮತ್ತು 2004ರ ಸೂಪರ್‌ಹಿಟ್ ಚಿತ್ರ 'ಮರ್ಡರ್'ನಲ್ಲಿ ನಟನೆಯ ಬಳಿಕ ಮಲ್ಲಿಕಾ ಹದಿಹರೆಯದವರ ಹಾಟ್ ಫೇವರೆಟ್. ನಟಿಸಿದ ಸಿನಿಮಾಗಳು ಬೆರಳೆಣಿಕೆಯಷ್ಟೇ ಆದರೂ ಮಲ್ಲಿಕಾ ಈಗ ಮಾಧ್ಯಮಗಳ ಕಣ್ಮಣಿ! ಬೆಂಗಳೂರಲ್ಲೂ ಹಾಗೆಯೇ ಆಯಿತು. 'ಮಲ್ಲಿಕಾ ಶೆರಾವತ್ ಬಂದಿದ್ದಾಳೆ' ಎಂದ ಮೇಲೆ ಛಾಯಾಗ್ರಾಹಕರ ಉತ್ಸಾಹದ ಬಗ್ಗೆ ಬೇರೆ ಹೇಳಬೇಕಿಲ್ಲ. ನಿಂತರೆ, ಕುಂತರೆ ಫೋಟೋ ಫ್ಲಾಶ್!



ದೆಹಲಿ ವಿಶ್ವವಿದ್ಯಾನಿಲಯದಿಂದ 'ಫಿಲಾಸಫಿ' ಪದವಿ ಪಡೆದ ಮಲ್ಲಿಕಾ ಹರಿಯಾಣ ಮೂಲದವಳು. 'ಹಿಸ್ಸ್'ನಲ್ಲಿ ಮಲ್ಲಿಕಾಳದ್ದು ಬುಸುಗುಟ್ಟುವ 'ನಾಗಿಣಿ'ಯ ಪಾತ್ರ. 24 ವರ್ಷಗಳ ಹಿಂದೆ ಬಂದ 'ನಾಗಿನ್' ಚಿತ್ರದ ಕಥೆಯನ್ನೇ ಈ ಚಿತ್ರವೂ ಹೋಲುತ್ತದೆ. ಆದರೆ ಆ ಬಳಿಕ ಚಿತ್ರರಂಗದಲ್ಲಿ ಬೆಳೆದಿರುವ ಅತ್ಯಾಧುನಿಕ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಈ ಹೊಸ ಚಿತ್ರ ಹೊಸ ಅನುಭವ ನೀಡುತ್ತದೆ ಎಂದರು ಮಲ್ಲಿಕಾ.

ಪತ್ರಕರ್ತರ ಜತೆ ಮಾತನಾಡಿದ ಮಲ್ಲಿಕಾಳ ಕೆಲವು ನುಡಿಮುತ್ತುಗಳು ಇಲ್ಲಿವೆ:

* 'ಹಿಸ್ಸ್'ನಲ್ಲಿ ಹಾವಿಗೆ ಕಿಸ್ ಕೊಡುವ ದೃಶ್ಯವಿದೆ. ನನಗೇನೂ ಭಯವಾಗಲಿಲ್ಲ; ಬದಲಾಗಿ ಹಾವಿಗೇ ಕೊಂಚ ಭಯವಾಗಿ ಗಾಬರಿಯಾದಂತೆ ಕಂಡಿತು!

* 'ಹಿಸ್ಸ್' ಸಿನಿಮಾದ ಶೂಟಿಂಗ್‌ನಲ್ಲಿ ಸಾಕಷ್ಟು ಶೋಷಣೆ ನಡೆದಿದೆ. ಕಾಸ್ಟ್ಯೂಮ್ ಮಾಡೋವಾಗಂತೂ ಸ್ವಲ್ಪ ದೈಹಿಕ ಶೋಷಣೆ ಆಗಿದೆ. ಮನೆಯಲ್ಲಿ, ಬಾತ್‌ರೂಂನಲ್ಲಿ ಎಲ್ಲಿ ಹೋದರೂ ಹಾವಿನ ಚಿತ್ರಣವೇ ಮೂಡಿಬರುತ್ತಿತ್ತು. ಹಾಗೆಂದು ನಾನು ಹಾವಿಗೆ ಹೆದರುವವಳಲ್ಲ.

* ಅಮೆರಿಕದಲ್ಲಿ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರೇ ಈ ಸಿನಿಮಾ ನೋಡಿ ಪ್ರತಿಕ್ರಿಯೆ ನೀಡುವುದಾಗಿ ಪ್ರಾಮಿಸ್ ಮಾಡಿದ್ದಾರೆ.

* ನನ್ನ ಸಹೋದರ ತುಂಬ ಸಂಪ್ರದಾಯವಾದಿ. ಆದರೆ ನಾನಲ್ಲ. ನಾನು ಆ ಚೌಕಟ್ಟಿನಿಂದ ಹೊರಗೇ ಇದ್ದೇನೆ. ಅವನ ಮಾತನ್ನು ನಾನು ಕೇಳುವುದೂ ಇಲ್ಲ.

* ನನ್ನನ್ನು ರಾಖಿ ಸಾವಂತ್ ಜತೆಗಾಗಲೀ, ಇನ್ನ್ಯಾರ ಜತೆಗಾಗಲೀ ಹೋಲಿಸುವುದು ನನಗಿಷ್ಟವಿಲ್ಲ. ನನಗೆ ನನ್ನದೇ ಆದ ಐಡೆಂಟಿಟಿ ಇದೆ.

ಹರಿಯಾಣದ ಈ ಜಾಟರ ಹುಡುಗಿ 2002ರಲ್ಲಿ ಹಿಂದಿ ಚಿತ್ರರಂಗಕ್ಕೆ ಬಂದಾಗ ಇದ್ದ ಹೆಸರು ರೀಮಾ ಲಂಬಾ. ಈಗ ಆ ಹೆಸರು ಯಾರಿಗೂ ನೆನಪಿಲ್ಲ. ಸಿನಿಮಾಕ್ಕೆ ಬರುವುದಕ್ಕೂ ಮುನ್ನ ಅಮಿತಾಭ್ ಬಚ್ಚನ್ ಜತೆ ಬಿಪಿಎಲ್ ಕಂಪೆನಿಗೆ, ಶಾರೂಕ್ ಜತೆ ಸ್ಯಾಂಟ್ರೊ ಕಾರಿಗೆ ಮಾಡೆಲಿಂಗ್ ಮಾಡಿದ್ದ ಮಲ್ಲಿಕಾ ಈಗ ಹಾಲಿವುಡ್ ಅಂಗಳದಲ್ಲಿದ್ದಾಳೆ. ವಿಲಿಯಂ ಡೀರ್ ನಿರ್ದೇಶನದ 'ಪಾಲಿಟಿಕ್ಸ್ ಆಫ್ ಲವ್' ಈಕೆಯ ಮುಂದಿನ ಬಿಡುಗಡೆಯ ಚಿತ್ರ. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾನ ಚುನಾವಣೆಯಲ್ಲಿ ಆತನ ಅಭಿಮಾನಿ ಪ್ರಚಾರಕಿಯೊಬ್ಬಳ ಕಥೆ ಇರುವ ಈ ಕಾಮಿಡಿ ಚಿತ್ರದ ಬಗ್ಗೆ ಮಲ್ಲಿಕಾ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾಳೆ. ನಗುವಾಗ ಕರಣ್ ಜೋಹರ್‌ನಂತೆ ಕಾಣುವ ಈ ಲಂಬೂ ಹುಡುಗಿ ಏರಿದ ಎತ್ತರ ಮಾತ್ರ ಎಲ್ಲರೂ ಬೆರಗಾಗುವಂತಿದೆ. ಗಾಯಕ ಹಿಮೇಶ್ ರೇಶಮಿಯಾ ನಿರ್ಮಾಣದ 'ಆಪ್ ಕಿ ಸುರೂರ್' ಚಿತ್ರದಲ್ಲಿ ಹತ್ತು ನಿಮಿಷದ ದೃಶ್ಯಕ್ಕೆ ಒಂದೂವರೆ ಕೋಟಿ ರೂಪಾಯಿ ಸಂಭಾವನೆ ಪಡೆದು ಸುದ್ದಿಯಾಗಿದ್ದ ಈಕೆ, ಐದು ವರ್ಷಗಳ ಹಿಂದೆಯೇ ಜಾಕಿ ಚಾನ್ ಜತೆ 'ದಿ ಮಿಥ್' ಎಂಬ ಚೈನೀಸ್ ಚಿತ್ರದಲ್ಲಿ ನಟಿಸಿದ್ದಾಳೆ. ಹಿಂದಿಯಲ್ಲೀಗ 'ಧಮಾಲ್–2' ಚಿತ್ರದ ಚಿತ್ರೀಕರಣ ನಡೆದಿದೆ. 'ಹಿಸ್ಸ್' ಚಿತ್ರ ಸೋತರೂ ಪ್ರಚಾರದಲ್ಲಿ ಮಲ್ಲಿಕಾ ಗೆದ್ದಾಗಿದೆ!

■ ಸುಮಾ

Pure Kanchee Wedding Sarees Collections
samyakk™
eternally graceful
A unit of Mahaveer Salection
'D' Souza Circle, Richmond Road
Opp. Lifestyle, Bangalore - 560 025
Ph. : 080 41113330/41227442
Web. : www.samyakk.com
Sarees-Ghagras-Kanjivaram-Salwar Suits
Nakshatra